| | | | |
|---|---|---|---|
| ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜು<br>ವಿ.ವಿ. ಪುರಂ, ಬೆಂಗಳೂರು–560 004 | | ತರಗತಿ: | ದ್ವಿತೀಯ ಪಿ.ಯು.ಸಿ |
| | | ವಿಷಯ: | ಕನ್ನಡ |
| Mock Exam-1 Feb.2016 | | ಗರಿಷ್ಠ ಅಂಕಗಳು: | 100 |
| | | ಸಮಯ: | 3:15 ಗಂಟೆಗಳು |

***ಸೂಚನೆ:– ಪ್ರಶ್ನೆ ಪತ್ರಿಕೆಯ ಮೇಲೆ ಏನನ್ನೂ ಬರೆಯಬಾರದು.***

## ಅ–ವಿಭಾಗ

**I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ: 1 x 10 =10**

1. ಶಿವಪಥವನ್ನು ಅರಿಯದಿದ್ದರೇನಾಗುವುದು?
2. ತತ್ವಜ್ಞಾನವನ್ನು ಕೇಳದವರಾರು?
3. ಲಕ್ಷದಾರಿಗಳ ಚದುರಂಗದಾಟ ಯಾವುದು?
4. ಜನರನ್ನು ಯಾವುದರಿಂದ ಪಾರು ಮಾಡುತ್ತೇನೆಂದು ಕವಿಯತ್ರಿ ಹೇಳುವರು?
5. ಬಾಯಿಚಪಲ ಯಾರಿಗೆ ಜಾಸ್ತಿ ಇರುತ್ತದೆ?
6. ಯಾವುದು ನಮ್ಮ ಮೈಗೆ ಹತ್ತುವುದು?
7. ನಾಗರಾಜ ಕೋವಿಹಿಡಿದು ಎಲ್ಲಿ ಕುಳಿತಿದ್ದ?
8. ಯಾವ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು?
9. ಪೊಲೀಸರು ಏನೆಂದು ಮಹಜರು ಬರೆದುಕೊಂಡರು?
10. ಶೇಷನು ರಾಮಾಯಣದ ಕತೆಯನ್ನು ಯಾರಿಗೆ ಹೇಳಿದನು?

## ಆ–ವಿಭಾಗ

**II. ನಾಲ್ಕು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ:– 2 x 4 = 8**

11. ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?
12. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?
13. ಹಡೆದ ತಂದೆ – ತಾಯಿಯರ ಮಹತ್ವ ತಿಳಿಸಿರಿ.
14. ಬಾನು ಮತ್ತು ಮರದ ನಿತ್ಯನೂತನೆಯ ಬಗ್ಗೆ ಕವಿ ಏನು ಹೇಳಿದ್ದಾರೆ?
15. ಎಣ್ಣೆ ತೀರಿದ ದೀಪಗಳು ಏನನ್ನು ಸೂಚಿಸುತ್ತವೆ?

**ಆ. ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 2 x 3 = 6**

16. ತಾನು ಅದೃಷ್ಟವಂತೆಯೆಂದು ಲೇಖಕಿ ಭಾವಿಸಲು ಕಾರಣವೇನು?
17. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?
18. ಲೇಖಕರಲ್ಲಿ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ?
19. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು?

**ಇ) ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:– 2 x 3 = 6**

20. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?

21. ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ್ದು ಹೇಗೆ?

22. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

23. ನಮ್ಮ ಕಡೆ ಕೆಮ್ಮುವುದು ಕಾಲಿಂಗ್‌ಬೆಲ್ ಇದ್ದಹಾಗೆ ಎಂದು ನಿರೂಪಕರು ಹೇಳುವುದು ಏಕೆ?

**ಇ – ವಿಭಾಗ**

**III ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3 x 2 = 6**

24. ತಾನೆ ಲಘುಮಾಡಿ ಲಘುವಾದನಯ್ಯ

25. ಮುನ್ನಿಸಲಿ ನಿಮ್ಮನ್ನ ಆ ದೇವರೇ!

26. ಒಮ್ಮೆ ನಕ್ಕೇ ನಗುತ್ತೇವೆ.

**ಅ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 1 = 3**

27. ನನ್ನ ದೃಷ್ಟಿಯಲ್ಲಿ ವಾರ್ತಾ ಇಲಾಖೆ ಇದ್ದಂತೆ.

28. ನಿನಗಾವ ರಸದೊಳಿಷ್ಟಂ?

**ಇ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 1 = 3**

29. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

30. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

**ಈ – ವಿಭಾಗ**

**IV ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 3= 12**

31. ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ?

32. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾರೆ?

33. ಮುದುಕಿಯ ತಳಮಳ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

34. ಬತ್ತಿ, ಎಣ್ಣೆ, ಭಕ್ತಿ, ಯೋಗಿ ಹಾಗು ಜೇಡ – ಇವುಗಳ ಆತ್ಮ ಸಮರ್ಪಣೆಯ ಆಶಯವನ್ನು ಕವಿತೆ ಹೇಗೆ ಚಿತ್ರಿಸಿದೆ?

**ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 2 = 8**

35. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿರಿ.

36. ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡತನವಿಲ್ಲದಿರುವ ಬಗ್ಗೆ ಹಾಮಾನಾ ಹೇಗೆ ಟೀಕಿಸಿದ್ದಾರೆ?

37. ಅಭಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

**ಇ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 2 = 8**

38. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

39. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.

40. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

## ಉ – ವಿಭಾಗ

**V ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ. 5 x 1 = 5**

41. ಕುರುಳ ನೇವರಿಸಿದನು ಗಲ್ಲವ
ನೊರೆಸಿ ಮುಂಡಾಡಿದನು ಮಂಚದ
ಹೊರೆಯ ಗಿಂಡಿಯ ನೀರಿನಲಿ ತೊಳೆದನು ಮುಖಾಂಬುಜವ
ಅರಸಿ ಬಿಡು ಬಿಡು ಖಾತಿಯನು
ವಿಸ್ತರಿಸಲೇಕೆ ಎಮ್ಮಣ್ಣನಾಜ್ಞೆಯ
ಗೆರೆಯ ದಾಂಟಿದೆ ದಾಂಟಿದೆನು ಹೋಗೆಂದನಾ ಭೀಮ

42. ಮನಮನ ಬೆರೆಸಿದಲ್ಲಿ ತನು ಕರಗದಿದ್ದಡೆ,
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ,
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ;
ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ?
ಎನ್ನಲ್ಲಿ ಇವಿಲ್ಲಾಗಿ, ಆನುಡಂಬಕ ಕಾಣಿರೇ!

## ಭಾಷಾಭ್ಯಾಸ

**VI ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ: 2 x 6 = 12**

43. ಈ ಪದಗಳಿಗೆ ಅರ್ಥಬರೆಯಿರಿ 1) ವಕ್ತಾರ 2) ಶಂಕೆ
44. ಈ ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ. 1) ಪ್ರಮೋದ, 2)ರಮಣ
45. ಈ ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ. 1) ಬೇರೂರು, 2) ತಿಪ್ಪರಲಾಗಹಾಕು
46. ಇವುಗಳ ಕಾಲಸೂಚಕಗಳನ್ನು ಗುರುತಿಸಿ. 1) ತಿಂದನು, 2) ಕುಣಿಯುತ್ತಿತ್ತು
47. ಇವುಗಳ ಗುಣವಾಚಕಗಳನ್ನು ಗುರುತಿಸಿ. 1) ಶುದ್ಧನೀರು, 2) ಬೆಳ್ಳಿಲೋಟ
48. ಇವುಗಳ ತದ್ಭವ ರೂಪ ತಿಳಿಸಿ: 1) ಧರಾ, 2) ಬಿತ್ತ
49. ಈ ದ್ವಿರುಕ್ತಿಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿರಿ: 1) ಹಚ್ಚಹಸಿರು 2) ಬಗ್ಗುಬಡಿ

**ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ. 5 x 1 = 5**

50. ತ್ಯಾಜ್ಯ ವಸ್ತುಗಳ ನಿರ್ವಹಣೆಯ ಸಮಸ್ಯೆ
51. ಅತಿವೃಷ್ಟಿ

**ಇ) ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. 4 x 1 = 4**

52. ಶೈಕ್ಷಣಿಕ ಸಾಲ ಸೌಲಭ್ಯಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಒಂದು ಪತ್ರ ಬರೆಯಿರಿ.
53. ಇತ್ತೀಚೆಗೆ ನಿಮ್ಮ ಬಡಾವಣೆಯಲ್ಲಿ ನಡೆದ ಕಡಲೇಕಾಯಿಪರಿಕ್ಷೆಯನ್ನು ಕುರಿತು ನಿಮ್ಮ ಆಹ್ವಾನಿಸಿದಂತೆ ಗೆಳೆಯ ಅಥವಾ ಗೆಳತಿಗೊಂದು ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ. 4 x 1 = 4**

54. ಕೋಣನಿಗೆ ದೊಣ್ಣೆ ಪೆಟ್ಟು, ಜಾಣನಿಗೆ ಮಾತಿನ ಪೆಟ್ಟು.
55. ಕೆಲಬರು ಗಳಿಸಿದೊಡೆ ಕಲರುಂಡು ಜಾರುವರು.

*****